**ಸಾಕ್ಷಿಯನ್ನು ಈ ದಿನ ದಿಃ 5.04.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**Pratap Kumar is placed as Co-ordinator.**

ಪಾಟೀ ಸವಾಲುಃ ಆರೋಪಿ/ಪರ ವಕೀಲರಿಂದಃ

1. ನನ್ನ ಮೇಲಾಧಿಕಾರಿಗಳು ನಮ್ಮ ಪ್ರಯೋಗಾಲಯದ ನಿರ್ದೇಶಕರಾಗಿರುತ್ತಾರೆ. ಸ್ವೀಕೃತಿ ವಿಭಾಗದಿಂದ, ಅವರು ಪಡೆದಂತಹ ವಸ್ತುಗಳು ನಮಗೆ ಬರುತ್ತವೆ. ನಮ್ಮ ಪ್ರಯೋಗಾಲಯದಲ್ಲಿ ಅನೇಕ ವೈಜ್ಞಾನಿಕ ಅಧಿಕಾರಿಗಳು ಇದ್ದಾರೆ. ನಮ್ಮ ನಿರ್ದೇಶಕರು ಈ ವಸ್ತುಗಳನ್ನು ವೈಜ್ಞಾನಿಕ ವಿಶ್ಲೇಷಣೆಗಾಗಿ ನನಗೆ ಹಂಚಿರುತ್ತಾರೆ. ಈ ಪ್ರಕರಣದ ವಸ್ತುಗಳು ನಮ್ಮ ನಿರ್ದೇಶಕರಿಗೆ ಯಾವಾಗ ತಲುಪಿದವು ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ.

2. ದಿಃ 06.09.2021 ರವರೆಗೆ ನನಗೆ ಹಂಚಿಕೆಯಾದ ವಸ್ತುಗಳು ನಮ್ಮ ವಿಭಾಗದ **Article Room** ನಲ್ಲಿ ಇದ್ದವು. ಸದರಿ **Article Room Safe custody** ಆಗಿರುತ್ತದೆ. ಮಾದರಿ ಮೊಹರು **M** ಎಂದು ಇತ್ತು. ಎರಡು ಫೋನ್ ಗಳು ಒಂದೊಂದು ಕವರ್ ನಲ್ಲಿ ಪ್ರತ್ಯೇಕವಾಗಿ ಇದ್ದವು.

3. **VIVO 1603** ಮೊಬೈಲ್ ಫೋನ್ ನನಗೆ ವಿಶ್ಲೇಷಣೆಗಾಗಿ ಬಂದಾಗ , ಅದು ಆಫ್ ಆಗಿತ್ತು. ಅದನ್ನು ಚಾರ್ಜ ಮಾಡಿ ಆನ್ ಮಾಡಿಕೊಂಡೆ. ಅದರಲ್ಲಿ ಯಾವುದೇ **Pattern** ಇರಲಿಲ್ಲ.

4. ಇನ್ನೊಂದು ಮೊಬೈಲ್ ಫೋನ್ ಸ್ಯಾಮ್ ಸಂಗ್ ಕಂಪನಿಯದಾಗಿತ್ತು. ಅದು ಆಫ್ ಆಗಿತ್ತು. ಅದನ್ನು ಚಾರ್ಜ ಮಾಡಿ ಆನ್ ಮಾಡಿಕೊಂಡೆ.

5. ವೈಜ್ಞಾನಿಕ ವಿಶ್ಲೇಷಣೆಗಾಗಿ ಸ್ಯಾಮ್ ಸಂಗ್ ಮೊಬೈಲ್ ಫೋನ್ ನ್ನು **D2A** ಎಂದು ಗುರುತುಪಡಿಸಿಕೊಳ್ಳಲಾಯಿತು. ಅದರಲ್ಲಿ ಜಿಯೋ ಸಿಮ್ ಕಾರ್ಡ ಇತ್ತು. ಈ ಮೊಬೈಲ್ ಫೋನ್ ನಲ್ಲಿ ಯಾವುದೇ **pictures** ಇರಲಿಲ್ಲ. ಸಿಮ್ ಕಾರ್ಡ ನಲ್ಲೂ **pictures** ಇರಲಿಲ್ಲ. ಇದರಲ್ಲಿ ಒಂದು ಸಿಮ್ ಕಾರ್ಡ ಮಾತ್ರವೇ ಇತ್ತು. ಅದರಲ್ಲಿ ಮೆಸೇಜ್ ಗಳು ಮತ್ತು ಕಾಲ್ ಗಳು ಇದ್ದ ಬಗ್ಗೆ ನಾನು ವಿಶ್ಲೇಷಿಸಿರುವುದಿಲ್ಲ , ಏಕೆಂದರೆ ಈ ಬಗ್ಗೆ ತನಿಖಾಧಿಕಾರಿಗಳು ಕೇಳಿರುವುದಿಲ್ಲ.

6. **VIVO** ಮೊಬೈಲ್ ಫೋನ್ ನಲ್ಲಿ ಏರ್ ಟೆಲ್ ಸಿಮ್ ಕಾರ್ಡ ಇತ್ತು. ತನಿಖಾಧಿಕಾರಿಗಳು ಸದರಿ ಮೊಬೈಲ್ ಫೋನ್ ಗಳ ನಂಬರ್ ಗಳನ್ನು ತಿಳಿಸಿದ್ದರು. **VIVO** ಮೊಬೈಲ್ ಫೋನ್ ಗೆ ಮೊಬೈಲ್ ನಂ. **8660343740** ನಿಂದ ಫೋಟೋ ಮತ್ತು ಮೆಸೇಜ್ ಬಂದಿರುವ ಬಗ್ಗೆ ನನ್ನ ಅಭಿಪ್ರಾಯ ವರದಿಯಲ್ಲಿ ತಿಳಿಸಿರುತ್ತೇನೆ. ಅದನ್ನು **extract** ಮಾಡಿ ಸಿಡಿ ಗೆ ಅಳವಡಿಸಿ ನನ್ನ ವರದಿಯೊಂದಿಗೆ ಲಗತ್ತಿಸಿ ಕೊಟ್ಟಿರುತ್ತೇನೆ. ಪ್ರಕರಣಕ್ಕೆ ಸಂಬಂಧಿಸಿದ **3** ಫೋಟೋಗಳನ್ನು ಮಾತ್ರವೇ **extract** ಮಾಡಿಕೊಟ್ಟಿರುತ್ತೇನೆ. ಆ **3** ಫೋಟೋಗಳು ಯಾವ ನಂಬರ್ ನಿಂದ ಆ **VIVO** ಮೊಬೈಲ್ ನ ವ್ಯಾಟ್ಸ್ ಅಪ್ ಗೆ ಬಂದಿರುತ್ತವೆ ಎಂದು ನನ್ನ **Annexure** ನಲ್ಲಿ ತಿಳಿಸಿರುತ್ತೇನೆ. ಆ **3** ಫೋಟೂಗಳು ಯಾವ ದಿನಾಂಕ, ಯಾವ ಸಮಯಕ್ಕೆ **VIVO** ಮೊಬೈಲ್ ಗೆ ಬಂದಿರುತ್ತವೆ ಎನ್ನುವುದನ್ನು ಸಹ ನನ್ನ **Annexure** ನಲ್ಲಿ ತಿಳಿಸಿರುತ್ತೇನೆ.

7. **D2A** ಮೊಬೈಲ್ ನಲ್ಲಿ ವ್ಯಾಟ್ಸ್ ಅಪ್ ಅಪ್ಲಿಕೇಷನ್ ಇರುವುದಿಲ್ಲ. **D1A** ವಿವೋ ಮೊಬೈಲ್ ನಂ **8660343740** ನಿಂದ ಫೋಟೋ ಮತ್ತು ಮೆಸೇಜ್ ಗಳು ದಿಃ **15.12.2020** ರಂದು ಬಂದಿರುತ್ತವೆ.

8. **D1A** ವಿವೋ ಮೊಬೈಲ್ ಗೆ **D2A Samsung mobile** ನಿಂದ ಮೆಸೇಜ್ ಗಳು ಮತ್ತು ಪೋಟೋಗಳು ಬಂದಿರುವ ಬಗ್ಗೆ ಯಾವುದೇ ಅಭಿಪ್ರಾಯವನ್ನು ನಾನು ನೀಡಿರುವುದಿಲ್ಲ.

9. **D1A** ವಿವೋ ಮೊಬೈಲ್ ನಲ್ಲಿದ್ದ **3** ಪೋಟೋಗಳನ್ನು ನಾನು ಯಾವ ಪೋಟೋಗಳೊಂದಿಗೂ ಸಹ ಹೋಲಿಸಿ ನೋಡಿರುವುದಿಲ್ಲ. ತನಿಖಾಧಿಕಾರಿಗಳು ಅವರ ಸೂಚನಾ ಪತ್ರದಲ್ಲಿ ಆ **3** ಪೋಟೋಗಳ **File Name** ಗಳನ್ನು ತಿಳಿಸಿದ್ದರು. ಆ **File Name** ಗಳು **IMG**–20201215–**WA**0001**.jpg**, **IMG**–20201215–**WA**0002**.jpg and IMG**–20201215–**WA**0003**.jpg** ಆಗಿದ್ದವು.

10. ನಾನು ಆ ಪೋಟೋಗಳನ್ನು ನಾನು ಕಳುಹಿಸರುವ ಸಿಡಿಯ **Annexure-A1c** ಯಲ್ಲಿ ಅಳವಡಿಸಿಕೊಟ್ಟಿರುತ್ತೇನೆ.

11. **D1A VIVO** ಮೊಬೈಲ್ ಗೆ ಮೊಬೈಲ್ ನಂ. **8660343740** ನಿಂದ ದಿಃ **15.12.2020** ರಂದು ಯಾವುದೇ ಪೋಟೋಗಳು ಬಂದಿರುವುದಿಲ್ಲ ಎನ್ನುವುದು ಸರಿಯಲ್ಲ.

12. **D1A VIVO** ಮೊಬೈಲ್ ಗೆ **D2A** ಮೊಬೈಲ್ ನಿಂದ ಯಾವುದೇ ಪೋಟೋಗಳು ಬಂದಿರುವುದಿಲ್ಲ ಎಂದು ಮಾಡಿದ ಸಲಹೆಗೆ ಸಾಕ್ಷಿ , **D2A** ಮೊಬೈಲ್ ನಿಂದ ಬಂದಿರುವುದಿಲ್ಲ ಎಂದು ಹೇಳಲು ಆಗುವುದಿಲ್ಲ , ಆದರೆ ಮೇಲೆ ಹೇಳಿದ ಮೊಬೈಲ್ ನಂ. **8660343740** ನಿಂದ ಬಂದಿರುತ್ತವೆ ಎಂದು ಮಾತ್ರ ಅಭಿಪ್ರಾಯ ಪಟ್ಟಿರುತ್ತೇನೆ.

ಪಾಟೀ ಸವಾಲುಃ 2 ನೇ ಆರೋಪಿ ಪರ ವಕೀಲರು ಮೇಲ್ಕಂಡ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಪ ಇ ಎ ಒ

5/4/25

3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು
ಮೈಸೂರು.